ಓಡಾಡುವುದನ್ನು ನೋಡಿದ್ದೆ. ಎಣ್ಣೆ ಅಂಗಡಿಗೆ ಹೋಗುವ ರಸ್ತೆ ಅದು. ಅವನನ್ನು ಕರೆದೆ. ನಾರಾಯಣ ಬಂದ.

"ನಿಮ್ಮ ಅಮ್ಮನ ಬಟ್ಟೆ ರೆಡಿಯಾಗಿದೆ. ತಗೊಂಡು ಹೋಗು" ಎಂದೆ.

"ಯಾವ ಬಟ್ಟೆ? ಅವಳೇ ಬರುತ್ತಾಳೆ. ತಗೊಂಡು ಹೋಗುತ್ತಾಳೆ" ಎಂದು ಹೋಗಲು ನೋಡಿದ.

ಅವನಿಗೆ ಎಲ್ಲಿ ಬಟ್ಟೆಯ ದುಡ್ಡು ಕೊಡಬೇಕಾಗುತ್ತದೆಯೋ? ಎಂಬ ಭಯ.

ಅದಕ್ಕೆ ನಾನೇ ಹೇಳಿದೆ. "ಬಟ್ಟೆಯ ದುಡ್ಡು ಕೊಡೋದು ಬೇಡ. ಅವಳು ಎಲ್ಲಾ ಕೊಟ್ಟು ಹೋಗಿದ್ದಾಳೆ'' ಎಂದ ಮೇಲೆ, "ಸರಿ, ಹಾಗಿದ್ದರೆ ಕೊಡಿ'' ಎಂದ. ಅವನಿಗೆ ಎಣ್ಣೆ ಅಂಗಡಿಗೆ ಹೋಗುವ ಅವಸರ. ಅಪ್ಪನಂತೆ ಮಗ. ಅವನಿಗೆ ಗಂಗಜ್ಜಿಯ ಬಟ್ಟೆ ಪ್ಯಾಕ್ ಮಾಡಿ ಕೊಟ್ಟೆ. ಅವನು ತಗೊಂಡು ಹೋದ. ನನಗೆ ನೆಮ್ಮದಿ. ದೀಪಾವಳಿಗೆ ಹೊಸ ಬಟ್ಟೆ ಹಾಕಿಕೊಳ್ಳುವ ಗಂಗಜ್ಜಿಯ ಆಸೆ ಈಡೇರಿಸಿದ ತೃಪ್ತಿ.

ಇದಾಗಿ ಹಲವು ದಿನ ಕಳೆದಿದೆ.

ದೀಪಾವಳಿ ಕಳೆದಿದೆ. ಒಂದು ದಿನ ನಮ್ಮ ಅಂಗಡಿಯ ಎದುರಿನ ರಸ್ತೆಯಲ್ಲಿ ನಾರಾಯಣ ಹೋಗುತ್ತಿರುವುದು ಕಾಣಿಸಿತು. ಕರೆದೆ. ಬಂದ.

"ಅಮ್ಮನ ಬಟ್ಟೆ ಕೊಟ್ಟೆಯಾ? ನಾರಾಯಣ'' ಎಂದೆ.

"ಯಾವ ಬಟ್ಟೆ?" ಏನೂ ಗೊತ್ತಿಲ್ಲವೆಂಬಂತೆ ಉತ್ತರಿಸಿದ.

"ಅದೇ ನಿನ್ನ ಅಮ್ಮ ಗಂಗಜ್ಜಿಯ ಹೊಸ ರವಿಕೆ ಬಟ್ಟೆ ಪ್ಯಾಕ್ ಮಾಡಿ ಕೊಟ್ಟಿದ್ದೆನಲ್ಲಾ" ಎಂದರೆ ಅವನು ತಲೆ ಕೆರೆದುಕೊಂಡು, "ಹೋ. ಆ ಬಟ್ಟೆ ಅದು ಇಲ್ಲೇ ಇದೆ" ಎಂದು ಉತ್ತರಿಸಬೇಕೇ?

ಆ ದಿನ ಕೊಟ್ಟಿದ್ದನ್ನು ಅವನು ಮರೆತು, ಎಣ್ಣೆಅಂಗಡಿಯಲ್ಲೇ ಬಿಟ್ಟು ಹೋಗಿದ್ದ. ನನಗೆ ಬೇಸರವೆನಿಸಿತು.

"ಹೋಗಲಿ. ಈಗಲಾದರೂ ತಗೊಂಡು ಹೋಗಿ ಕೊಡು. ಅಮ್ಮನಿಗೆ ಖುಷಿಯಾಗಲಿ" ಎಂದೆ.

"ಈಗ ಅಮ್ಮ ಇಲ್ಲ. ದೀಪಾವಳಿಯ ಮಾರನೆಯ ದಿನವೇ ತೀರಿಕೊಂಡಳು" ಎನ್ನಬೇಕೆ? ನನಗೆ ಏನು ಹೇಳಬೇಕೋ, ತಿಳಿಯಲಿಲ್ಲ.

ಕೊನೆಗೂ ದೀಪಾವಳಿಗೆ ಹೊಸ ಬಟ್ಟೆ ಹಾಕಿಕೊಳ್ಳಬೇಕೆಂಬ ಗಂಗಜ್ಜಿಯ ಆಸೆ ಈಡೇರಲೇ ಇಲ್ಲ. ಇದಕ್ಕೆ ಯಾರು ಕಾರಣ ಎಂಬ ಪ್ರಶ್ನೆ ಮಾತ್ರ ನನ್ನನ್ನು ಕಾಡುತ್ತಲೇ ಇದೆ.


### ಟಿ.ಎಂ. ಶೇಷಗಿರಿ

ಸಾಗರ ತಾಲ್ಲೂಕಿನ ತುಮರಿಯವರು. ವೃತ್ತಿಯಲ್ಲಿ ಕೃಷಿಕ. ಕಲೆ, ಸಾಹಿತ್ಯ, ಪತ್ರಿಕೋದ್ಯಮ ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದಾರೆ. 'ಕುತೂಹಲದ ಕಥೆಗಳು', 'ದೇವಾಲಯದ ಬುಡದಲ್ಲೊಂದು ಗಿಡ' ಪ್ರಕಟಿತ ಕಥಾಸಂಕಲನಗಳು. 'ಯಕ್ಷಬಳಗ' ಸಂಸ್ಥೆ ಹುಟ್ಟುಹಾಕಿ, ರಾಜ್ಯದಾದ್ಯಂತ 3,500ಕ್ಕೂ ಹೆಚ್ಚು ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದಾರೆ. ಯಕ್ಷಗಾನದ ಭಾಗವತ, ಪ್ರಸಂಗಕರ್ತ. 'ಸಿಗಂದೂರು ಕ್ಷೇತ್ರ ಮಹಾತ್ಮೆ', 'ವಂದೇ ಗೋ ಮಾತರಂ', 'ಸ್ವರ್ಗ ಸಂತಾಪ' ಮುಂತಾಗಿ 12ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದು, ಸಾವಿರಾರು ಪ್ರದರ್ಶನಗಳಾಗಿವೆ. ಭದ್ರಾವತಿ ಆಕಾಶವಾಣಿ ಕಲಾವಿದರಾಗಿರುವ ಅವರು ದೂರದರ್ಶನದಲ್ಲೂ ಕಾರ್ಯಕ್ರಮ ನೀಡಿದ್ದಾರೆ.